ೆ / ವಿಷಯ : DEPARTMENT / SUBJECT: ಪ್ರಧಾನಿ - ಸಂಪಾದಕೀಯ

ು ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 28/9/20

**ಕನ್ನಡಪ್ರಭ**
ಸಂಪಾದಕೀಯ

28/9 ಕ.ಪ್ರ

# ವಿಶ್ವಸಂಸ್ಥೆಗೆ ಮೋದಿ ಸರಿಯಾದ ಪಾಠ: ವ್ಯವಸ್ಥೆ ಬದಲಾಗಬೇಕು

ವಿಶ್ವಸಂಸ್ಥೆ ಸ್ಥಾಪನೆಯಾಗಿ 75 ವರ್ಷ ಸಂದಿರುವ ಹಿನ್ನೆಲೆಯಲ್ಲಿ ನಡೆಯುತ್ತಿರುವ ಐತಿಹಾಸಿಕ ಮಹಾಧಿವೇಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾಡಿದ ಭಾಷಣ ಇಡೀ ಜಗತ್ತಿನ ಗಮನ ಸೆಳೆದಿದೆ. ಮುಖ್ಯವಾಗಿ, ಇಂದು ಜಗತ್ತಿನ ಮುಂಚೂಣಿ ಆರ್ಥಿಕತೆಯೂ ಪ್ರಮುಖ ದೇಶವೂ ಆಗಿರುವ ಭಾರತವನ್ನು ಭದ್ರತಾ ಮಂಡಳಿಯ ಕಾಯಂ ಸದಸ್ಯನಾಗಿ ಸ್ವೀಕರಿಸಲು ವಿಶ್ವಸಂಸ್ಥೆ ಎಣಿಸುತ್ತಿರುವ ಮೀನಮೇಷವನ್ನು ಅವರು ತರಾಟೆ ತೆಗೆದುಕೊಂಡಿದ್ದಾರೆ. ಅಲ್ಲದೆ ವಿಶ್ವಸಂಸ್ಥೆಯ ಕಾರ್ಯಚಟುವಟಿಕೆ, ಅದರ ಗುಣಲಕ್ಷಣಗಳು ಹಾಗೂ ಉದ್ದೇಶಗಳಲ್ಲೇ ಆಮೂಲಾಗ್ರ ಬದಲಾವಣೆಯಾಗಬೇಕಾದ ಅಗತ್ಯವನ್ನೂ ಎತ್ತಿ ಹೇಳಿದ್ದಾರೆ. ಅವರ ಮಾತು ಅಕ್ಷರಶಃ ನಿಜ. ಎರಡನೇ ವಿಶ್ವ ಮಹಾಯುದ್ಧ ಮುಗಿದ ನಂತರ 1945ರಲ್ಲಿ ವಿಶ್ವಸಂಸ್ಥೆ ರಚನೆಯಾಯಿತು. ಜಗತ್ತಿನಲ್ಲಿ ಮುಂದೆ ಅಂತಹ ಮಹಾಯುದ್ಧಗಳು ನಡೆಯುವುದನ್ನು ತಪ್ಪಿಸಬೇಕು, ದೇಶ-ದೇಶಗಳ ನಡುವೆ ಸೌಹಾರ್ದತೆಯಿರಬೇಕು, ಭಿನ್ನಮತಗಳು ಬಂದಾಗ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ಒಬ್ಬ ಮಧ್ಯಸ್ಥಿಕೆದಾರನೂ ಒಂದು ವೇದಿಕೆಯೂ ಇರಬೇಕು ಎಂಬ ಉದ್ದೇಶದೊಂದಿಗೆ ವಿಶ್ವಸಂಸ್ಥೆ ರಚನೆಯಾಗಿತ್ತು. ಅಂದು ಜಾಗತಿಕ ಮಟ್ಟದಲ್ಲಿ ಪ್ರಬಲವಾಗಿದ್ದ ದೇಶಗಳು ಭದ್ರತಾ ಮಂಡಳಿಯ ಕಾಯಂ ಸದಸ್ಯರಾದವು. ಭಾರತಕ್ಕೆ ಆಗಿನ್ನೂ ಸ್ವಾತಂತ್ರ್ಯ ಲಭಿಸಿರಲಿಲ್ಲ. ಸ್ವಾತಂತ್ರ್ಯಾನಂತರವೂ ಭಾರತ ಈಗಿನ ಸ್ಥಿತಿಗೆ ತಲುಪಲು ಸಾಕಷ್ಟು ವರ್ಷಗಳೇ ಹಿಡಿದಿವೆ. ಈಗ ಭಾರತವು ಜಗತ್ತಿನ ಅತಿದೊಡ್ಡ ಆರ್ಥಿಕ ಶಕ್ತಿಗಳಲ್ಲಿ ಒಂದು. ಜಗತ್ತಿನ 2ನೇ ಅತಿಹೆಚ್ಚು ಜನಸಂಖ್ಯೆ ಹೊಂದಿದ ದೇಶ. ಜಗತ್ತಿನ ಶೇ.17ರಷ್ಟು ಜನರು ಭಾರತದಲ್ಲಿದ್ದಾರೆ. 193 ಸದಸ್ಯ ರಾಷ್ಟ್ರಗಳಿರುವ ವಿಶ್ವಸಂಸ್ಥೆಯಲ್ಲಿ ಶೇ.17ರಷ್ಟು ಜನಸಂಖ್ಯೆಯ ದೇಶಕ್ಕೆ ನೀತಿನಿರೂಪಣೆಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಹಕ್ಕಿಲ್ಲ ಎಂದಾದರೆ ಹೇಗೆ?

> **ಮಹಾಯುದ್ಧ ಮುಗಿದ ನಂತರ ವಿಶ್ವಸಂಸ್ಥೆ ರಚನೆಯಾದಾಗ ಇದ್ದ ಜಗತ್ತಿನ ಪರಿಸ್ಥಿತಿ ಮತ್ತು ಸಮಸ್ಯೆಗಳಿಗೂ ಈಗಿನ ಕಾಲಘಟ್ಟಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಆದರೆ ವಿಶ್ವಸಂಸ್ಥೆ ಬದಲಾಗಿಲ್ಲ.**

ಹತ್ತಾರು ವರ್ಷಗಳಿಂದಲೇ ವಿಶ್ವಸಂಸ್ಥೆಯ ಕಾಯಂ ಭದ್ರತಾ ಮಂಡಳಿಯಲ್ಲಿ ಸ್ಥಾನ ಪಡೆಯಲು ಭಾರತ ಪ್ರಯತ್ನಿಸುತ್ತಿದೆ. 5 ಸದಸ್ಯ ರಾಷ್ಟ್ರಗಳ ಪೈಕಿ ಅಮೆರಿಕ, ರಷ್ಯಾ, ಫ್ರಾನ್ಸ್ ಮತ್ತು ಬ್ರಿಟನ್ ದೇಶಗಳು ಭಾರತವನ್ನು ಸೇರಿಸಿಕೊಳ್ಳಲು ಬೆಂಬಲ ವ್ಯಕ್ತಪಡಿಸಿವೆ. ಆದರೆ, ಇನ್ನೊಂದು ಸದಸ್ಯ ರಾಷ್ಟ್ರವಾಗಿರುವ ಚೀನಾ ಅಡ್ಡಿಯಾಗಿದೆ. ಇಲ್ಲಿ ಬಹುಮತದ ಆಧಾರದ ಮೇಲೆ ನಿರ್ಧಾರ ಕೈಗೊಳ್ಳುವ ವ್ಯವಸ್ಥೆಯಿಲ್ಲ. ಬದಲಿಗೆ, ಈ ಸದಸ್ಯ ರಾಷ್ಟ್ರಗಳಿಗೆಲ್ಲ ವಿಟೋ ಅಧಿಕಾರವಿದೆ. ಅಂದರೆ ನಾಲ್ಕು ದೇಶಗಳ ನಿರ್ಧಾರವನ್ನು ಒಂದು ದೇಶ ತಡೆಯಬಹುದು. ಹೀಗಾಗಿ ಸರ್ವಾನುಮತದ ನಿರ್ಣಯವೇ ಆಗಬೇಕು. ಆದರೆ, ಚೀನಾ ದೇಶ ಭಾರತವನ್ನು ಬೆಂಬಲಿಸುವ ಪ್ರಶ್ನೆಯೇ ಇಲ್ಲ. ಹೀಗಾಗಿ ಭಾರತವು ವಿಶ್ವಸಂಸ್ಥೆಯ ನೀತಿ-ನಿಯಮಗಳಲ್ಲೇ ಬದಲಾವಣೆಯನ್ನು ಕೋರುತ್ತಿದೆ.

ದೊಡ್ಡ ರಾಷ್ಟ್ರ ಅಥವಾ ಸಣ್ಣ ರಾಷ್ಟ್ರ ಎಂಬ ಭೇದವಿಲ್ಲದೆ ಎಲ್ಲ ಸಾರ್ವಭೌಮ ಸ್ವತಂತ್ರ ರಾಷ್ಟ್ರಗಳೂ ವಿಶ್ವಸಂಸ್ಥೆಯಲ್ಲಿ ಸಮಾನ ಗೌರವ ಹೊಂದಿರಬೇಕು. ಆದರೆ, ಹಣಬಲ ಮತ್ತು ದೇಶಗಳ ಬೆಂಬಲದ ಆಧಾರದ ಮೇಲೆ ಭದ್ರತಾ ಮಂಡಳಿಯಲ್ಲಿರುವ ಐದು ರಾಷ್ಟ್ರಗಳು ಹೆಚ್ಚಿನ ಗೌರವ ಪಡೆಯುತ್ತಿವೆ. ಇದು ನ್ಯಾಯವಲ್ಲ. ಜಾಗತಿಕ ಬೆಂಬಲದ ಆಧಾರದಲ್ಲೇ ನೋಡಿದರೂ ಭಾರತಕ್ಕಿಂದು ಅಭೂತಪೂರ್ವ ಬೆಂಬಲವಿದೆ. ಭಾರತವನ್ನು ಕಡೆಗಣಿಸಿ ಜಾಗತಿಕ ವೇದಿಕೆಯಲ್ಲಿ ಯಾವುದೇ ಮಹತ್ವದ ನಿರ್ಣಯಗಳು ಆಗುತ್ತಿಲ್ಲ. ಹೀಗಿರುವಾಗ ವಿಶ್ವಸಂಸ್ಥೆಯಲ್ಲಿ ಮಾತ್ರ ಭಾರತದ ಕಡೆಗಣನೆ ಮುಂದುವರೆಯಬೇಕೇ? ಜಾಗತಿಕ ಸಮುದಾಯದಿಂದ ನೆರವು ಪಡೆಯುತ್ತಿದ್ದ ಹಂತದಿಂದ ಇಂದು ಭಾರತವು ಜಗತ್ತಿನ ಇತರ ದೇಶಗಳಿಗೆ ನೆರವು ನೀಡುವ ಮಟ್ಟಕ್ಕೆ ಏರಿದೆ. ಕೆಲವೇ ವರ್ಷಗಳಲ್ಲಿ ನಮ್ಮದು ಜಗತ್ತಿನಲ್ಲೇ ಅತಿಹೆಚ್ಚು ಜನಸಂಖ್ಯೆಯ ದೇಶವಾಗಲಿದೆ. ಏಷ್ಯಾದಲ್ಲಿ ಹೆಚ್ಚುತ್ತಿರುವ ಚೀನಾದ ಆಟಾಟೋಪಗಳಿಗೆ ಕಡಿವಾಣ ಹಾಕುವುದಕ್ಕೂ ಜಗತ್ತಿಗೆ ಈ ಭಾಗದಲ್ಲಿ ವ್ಯೂಹಾತ್ಮಕ ಶಕ್ತಿಯಾಗಿ ಭಾರತ ಬೇಕು. ಈಗಾಗಲೇ ಚೀನಾ ವಿಷಯದಲ್ಲಿ ಅಮೆರಿಕವು ವಿಶ್ವಸಂಸ್ಥೆಗೇ ತಿರುಗಿ ನಿಂತಿದೆ. ಇನ್ನು ಭಾರತವೂ ವಿಶ್ವಸಂಸ್ಥೆಗೆ ತಿರುಗಿ ನಿಂತರೆ ಜಾಗತಿಕ ಸೌಹಾರ್ದಕ್ಕಾಗಿ ರಚನೆಯಾಗಿರುವ ಈ ಸಂಸ್ಥೆಯ ಮೂಲ ಉದ್ದೇಶಕ್ಕೇ ಧಕ್ಕೆಯಾಗಲಿದೆ. ಅದನ್ನು ವಿಶ್ವಸಂಸ್ಥೆಯೂ, ಭದ್ರತಾ ಮಂಡಳಿಯ ಕಾಯಂ ಸದಸ್ಯರೂ ಮತ್ತು ಇತರ ಸದಸ್ಯ ರಾಷ್ಟ್ರಗಳೂ ಮನಗಾಣಬೇಕಿದೆ. ಈ ವಿಷಯದಲ್ಲಿ ವಿಶ್ವಸಂಸ್ಥೆಯ 75ನೇ ವರ್ಷಾಚರಣೆ ಮಹತ್ವದ ಮೈಲುಗಲ್ಲಾಗಬೇಕಿದೆ.